(ಗೊಂದಲ)

ಶ್ರೀ ಜಗದೀಶ ಶೆಟ್ಟರ್:- ಇಷ್ಟು ಅವಧಿಯೊಳಗೆ ಮಾಡುತ್ತೇವೆ ಎಂದು ಅವರು ಹೇಳುತ್ತಿಲ್ಲ. ಹಿಂದೆ ಮಾಡುತ್ತೇವೆ ಎಂದು ಹೇಳಿ ಈಗ ಎರಡು ವರ್ಷಗಳಾಗಿದೆ.

ಅಧ್ಯಕ್ಷರು:- ಅದಷ್ಟು ಬೇಗ ಎಂದು ಹೇಳಿದ್ದಾರೆ.

ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):-ಮಾನ್ಯ ಅಧ್ಯಕ್ಷರೇ, ಕ್ಯಾಬಿನೆಟ್ ಸಬ್‌ಕಮಿಟಿಯಲ್ಲಿ ಮಾನ್ಯ ಸಚಿವರು, ಶೆಟ್ಟರ್ ಅವರು ಮತ್ತು ಎಲ್ಲಾ ಸದಸ್ಯರು ಏನು ಹೇಳಿದ್ದಾರೆ ಅದನ್ನು ವಿಮರ್ಶೆಮಾಡಿ ಬಯಲು ಸೀಮೆ ಪ್ರದೇಶ ಅಭಿವೃದ್ಧಿಗೆ ಹೆಚ್ಚು ಹಣ ಕೊಡಬೇಕೆಂದು, ಗರಿಷ್ಠ ಪ್ರಮಾಣದಲ್ಲಿ ಕೊಡಬೇಕೆಂದು ನಾವು ನಿರ್ಣಯ ಮಾಡಿದ್ದೇವೆ. ಇದು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಅಲೊಕೇಶನ್ ಬಗ್ಗೆ ತಿಳಿದುಕೊಂಡು ಹೇಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು:- ಲೋಕೋಪಯೋಗಿ ಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ, ಕೇಳಿ.

ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು):- 21ನೇ ತಾರೀಖು 4 ಗಂಟೆಗೆ ಕ್ಯಾಬಿನೆಟ್ ಸಬ್‌ಕಮಿಟಿ ಮೀಟಿಂಗ್ ಆಯಿತು. ಮಾನ್ಯ ರಮಾನಾಥರೈ, ಮಾನ್ಯ ಜಯಚಂದ್ರ ಅಲ್ಲದೆ ಸಂಬಂಧಪಟ್ಟ ಶಾಸಕರು ಮೊದಲಿನಿಂದಲೂ ಇದರ ಬಗ್ಗೆ ಒತ್ತಾಯ ಮಾಡುತ್ತಾ ಬಂದಿದ್ದಾರೆ. ಎಲ್ಲರೂ ಬಯಲುಸೀಮೆ ಪ್ರದೇಶ ಅಭಿವೃದ್ಧಿ ನಿಗಮಕ್ಕೆ ಹೆಚ್ಚು ಹಣ ಕೊಡಬೇಕೆಂದು ಹೇಳಿದ್ದಾರೆ. ಈಗಾಗಲೇ 40 ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂದು, -we have taken a decision. 40 ಕೋಟಿ ರೂಪಾಯಿಗಳಿಗೆ ಪ್ರಪೋಸಲ್ ಕೂಡ ಮಾಡುತ್ತಿದ್ದೇವೆ. ಅದನ್ನು ಮಾಡಿ ಎಲ್ಲಾ ಕಡೆಗೂ ಕೆಲಸ ಆಗುವಂತೆ ಮಾಡುತ್ತೇವೆ.

ಶ್ರೀ ಎಸ್.ಎಸ್.ಪಾಟೀಲ್:- ಅಧ್ಯಕ್ಷರೇ.....

ಅಧ್ಯಕ್ಷರು: ಇಲ್ಲ, ಸಾಧ್ಯವಿಲ್ಲ.

ನಾಗಮಂಗಲ ಕ್ಷೇತ್ರದ ಬಿಂಡಿಗನವಿಲೆ ಗ್ರಾಮದ ಪಶು ವೈದ್ಯ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ : 41(757)

ಸದಸ್ಯರ ಹೆಸರು : ಶ್ರೀ ಎನ್.ಚೆಲುವರಾಯಸ್ವಾಮಿ(ನಾಗಮಂಗಲ)

ಉತ್ತರಿಸುವ ಸಚಿವರು : ಶ್ರೀ ಎ.ಕೃಷ್ಣಪ್ಪ(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಪ್ರಶ್ನೆ

ಅ) ನಾಗಮಂಗಲ ಕ್ಷೇತ್ರದ ಬಿಂಡಿಗನವಿಲೆ ಗ್ರಾಮದ ಪಶುವೈದ್ಯ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ಕಾರ್ಯ ಯಾವ ಹಂತದಲ್ಲಿದೆ. (ವಿವರ ನೀಡುವುದು)

ಆ) ಪಶುವೈದ್ಯ ಇಲಾಖೆಯಿಂದ ರೈತರಿಗೆ ಯಾವ ಸೌಲಭ್ಯಗಳಿವೆ, ಇವನ್ನು ಯಾವ ಮೌಲ್ಯ ಮಾಪನದ ಮೇಲೆ ವಿತರಿಸಲಾಗಿದೆ?

ಇ) ಕಾಳಿಂಗನಹಳ್ಳಿ, ಹೊನ್ನವರ, ಟಿ.ಚಿನ್ನಪುರ, ರಾಮನಹಳ್ಳಿ, ಗ್ರಾಮಪಂಚಾಯತಿಗಳಿಗೆ ಹೊಸ ಪಶು ಚಿಕಿತ್ಸಾಲಯ ತೆರೆಯಲು ಸರ್ಕಾರ ಅನುಮತಿ ನೀಡಿದೆಯೇ?

ಈ) ಪಶು ಚಿಕಿತ್ಸಾಲಯಗಳಲ್ಲಿ ವೈದ್ಯರು ಮತ್ತು ಇತರೆ ಸಿಬ್ಬಂದಿ ವರ್ಗದವರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಈ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದೇ?

ಉತ್ತರ

ಅ) ಇಲ್ಲಿ ಪಶು ಚಿಕಿತ್ಸಾಲಯವಿದ್ದು ಸರ್ಕಾರಕ್ಕೆ ಇದನ್ನು ಪಶು ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇರುವುದಿಲ್ಲ.

ಆ) 1. ಕೃತಕ ಗರ್ಭಧಾರಣೆ

2. ಮೇವು ಅಭಿವೃದ್ಧಿ

3. ಮೇವಿನ ಬೀಜಗಳ ಕಿರು ಪೊಟ್ಟಣಗಳ ವಿತರಣೆ

4. ಹಂದಿಮರಿಗಳ ವಿತರಣೆ

5. ಮೇವಿನ ಸಸಿಗಳ ವಿತರಣೆ

6. ಗಿರಿರಾಜ ಕೋಳಿ ಮರಿಗಳ ವಿತರಣೆ

7. ಕೊಕ್ಕರೆ ರೋಗ ಮತ್ತು ಕಾಲುಬಾಯಿ ಜ್ವರದ ವಿರುದ್ಧ ಲಸಿಕೆ

8. ವಿಶೇಷ ಘಟಕ ಯೋಜನೆಯಡಿ ಹಸು ಮತ್ತು ಹಂದಿ ಘಟಕಗಳಿಗೆ ಸಾಲ ಸೌಲಭ್ಯ

9. ಗಿರಿಜನ ಉಪಯೋಜನೆಯಡಿ ಹಸು ಮತ್ತು ಹಂದಿ ಘಟಕಗಳಿಗೆ ಸಾಲ ಸೌಲಭ್ಯ.

10. ರೈತರಿಗೆ ತರಬೇತಿ ಕಾರ್ಯಕ್ರಮ.

ಫಲಾನುಭವಿ ಆಧಾರಿತ ಯೋಜನೆಗಳ ಅಡಿಯಲ್ಲಿ ಫಲಾನುಭವಿಗಳನ್ನು ಬಡತನ ರೇಖೆಯ ಮೌಲ್ಯಮಾಪನ ಆಧಾರದ ಮೇಲೆ ಗ್ರಾಮಸಭೆಗಳಲ್ಲಿ ಗುರುತಿಸಿ ನಂತರ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಅನುಮೋದನೆಯೊಂದಿಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಇಲ್ಲ.

ಈ) ಬಂದಿದೆ. ಮುಂಬಡ್ತಿ ನಿಯೋಜನೆ ಹಾಗೂ ನೇಮಕಾತಿ ಮಾಡುವ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎನ್.ಚೆಲುವರಾಯಸ್ವಾಮಿ:- ಮಾನ್ಯ ಅಧ್ಯಕ್ಷರೇ, ಮಾನ್ಯಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ಪಶು ಚಿಕಿತ್ಸಾಲಯ ಇದ್ದು ಇದನ್ನು ಪಶುವೈದ್ಯ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇರುವುದಿಲ್ಲವೆಂದು ಹೇಳಿದ್ದಾರೆ. ನಾನು ಕಾಟಾಚಾರಕ್ಕೆ ಸರ್ಕಾರಕ್ಕೆ ಪ್ರಶ್ನೆ ಕಳುಹಿಸಿಲ್ಲ. ಅಲ್ಲಿ ನಿಜವಾಗಿಯೂ ಅದರ ಅವಶ್ಯಕತೆ ಇದೆ. ಇದೊಂದು ಹೋಬಳಿ ಹೆಡ್‌ಕ್ವಾರ್ಟರ್ಸ್ ಇದ್ದು ನೂರಕ್ಕೂ ಹೆಚ್ಚು ಸಣ್ಣಪುಟ್ಟ ಹಳ್ಳಿಗಳು ಇದಕ್ಕೆ ಸೇರುವುದರಿಂದ ನಾಗಮಂಗಲ ಕೇಂದ್ರಕ್ಕೆ ಜನರಿಗೆ ಬರಲು ತೊಂದರೆ ಇದೆ. ಅಷ್ಟು ದೂರ ಜಾನುವಾರುಗಳನ್ನು ಕರೆದುಕೊಂಡು ಬರಲಿಕ್ಕೆ ಹೇಗೆ ಸಾಧ್ಯವಾಗುತ್ತದೆ? ತಾಲ್ಲೂಕು ಕೇಂದ್ರದಲ್ಲಿ ಔಷಧಿಗಳನ್ನು ಸರಿಯಾಗಿ ಕೊಡದೇ ಇರುವುದರಿಂದ ಈ ಪಶುಚಿಕಿತ್ಸಾಲಯವನ್ನು ಮೇಲ್ದರ್ಜೆಗೇರಿಸಬೇಕೆಂದು ನಾನು ಕೇಳಿದ್ದೇನೆ. ನೀವು 'ಇಲ್ಲ' ಎಂದು ಹೇಳಿಬಿಟ್ಟರೆ ಹೇಗೆ? ಕಳೆದ ಮೂರು ವರ್ಷಗಳಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಮೂರು ವರ್ಷಗಳಿಂದಲೂ ಕೂಡ ಇದೇ ಉತ್ತರ ಬರುತ್ತಿದೆ. ಆದ್ದರಿಂದ ಪ್ರಶ್ನೆ ಕೇಳುವುದೇ ಬೇಡ ಎಂದರೆ ಬಹುಶಃ ಇದು ಸರಿಯಾಗಬಹುದು ಅನ್ನಿಸುತ್ತದೆ. ಅದೇ ರೀತಿ ಹೊನ್ನವರ, ಟಿ.ಚಿನ್ನಪುರ, ರಾಮನಹಳ್ಳಿ

ಗ್ರಾಮಪಂಚಾಯತಿಗೂ ಪಶು ಚಿಕಿತ್ಸಾಲಯ ಬೇಕೆಂದು ಕೇಳಿದ್ದೆ. ನೀವು ಬೇಕಾದರೆ ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಳ್ಳಿ. ಸುತ್ತಮುತ್ತ ಹಳ್ಳಿಯವರು ಜಾನುವಾರುಗಳನ್ನು 20 ಕಿಲೋಮೀಟರ್ ದೂರದ ಪಶು ಚಿಕಿತ್ಸಾ ಕೇಂದ್ರಕ್ಕೆ ಕರೆದುಕೊಂಡು ಹೋಗಬೇಕಾಗುತ್ತದೆ. ಆದ್ದರಿಂದ ಜನರಿಗೆ ಬಹಳ ತೊಂದರೆ ಇದೆ. ನೀವು ಅನುಮತಿ ಕೊಡುವುದಿಲ್ಲ ಎಂದು ಹೇಳಿಬಿಟ್ಟರೆ ಹೇಗೆ? ಕೊನೆಯಪಕ್ಷ ನಿಮ್ಮ ಸರ್ಕಾರದಲ್ಲಿ ಹಳ್ಳಿಗಳಲ್ಲಿ ಜಾನುವಾರುಗಳಿಗೆ, ಜನರಿಗೆ ತೊಂದರೆಯಾದರೆ ನಾವು ಸ್ಪಂದಿಸುತ್ತೇವೆ ಎನ್ನುವ ಮಾತನ್ನು ಹೇಳಿ ಹೋಬಳಿಯಂಥ ಪ್ರಮುಖ ಸ್ಥಳದಲ್ಲಿ ಪಶು ಚಿಕಿತ್ಸೆಗೆ ಆಸ್ಪತ್ರೆ ಇಲ್ಲವೆಂದರೆ ಹೇಗೆ? ಹೀಗೆ ಮಾಡಿದರೆ ಸಮಸ್ಯೆ ಯಾವರೀತಿಯಿಂದ ಪರಿಹಾರವಾಗುತ್ತದೆ? ಈ ರೀತಿ ಉತ್ತರ ಕೊಟ್ಟಿರತಕ್ಕಂಥಾದ್ದು ಸರಿಯಲ್ಲ. ನಿಖರವಾಗಿ ಈ ವರ್ಷ ಮಾಡುತ್ತೇವೆ ಎಂದು ಹೇಳಬೇಕು.

ಅಧ್ಯಕ್ಷರು:- ಉತ್ತರ ಹೇಳಿ. ಅವರು ಕೇಳಿದ ಪ್ರಶ್ನೆಯನ್ನೇ ಪುನಃ ಓದುತ್ತಿದ್ದಾರೆ.

ಶ್ರೀ ಎನ್.ಚೆಲುವರಾಯಸ್ವಾಮಿ:- ಸಮಸ್ಯೆಯನ್ನು ಹೇಳುವುದಕ್ಕೆ ತಾವು ನನಗೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು:- ನೀವು ಪ್ರಶ್ನೆಯನ್ನು ಓದುತ್ತಿದ್ದೀರಿ. ಉಪ ಪ್ರಶ್ನೆಯನ್ನು ಕೇಳಿ.

ಶ್ರೀ ಎ.ಕೃಷ್ಣಪ್ಪ(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):- ಎರಡು ವರ್ಷಗಳಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಎರಡು ವರ್ಷಗಳಿಂದ ಸರ್ಕಾರ ಏನೂ ಸುಮ್ಮನೆ ಕುಳಿತಿಲ್ಲ. ಮಾಡಬೇಕಾದಂಥ ಕೆಲಸವನ್ನು ಸರ್ಕಾರ ಮಾಡುತ್ತಲೇ ಇದೆ. ಹೊಸ ಸಂಸ್ಥೆಗಳನ್ನು ಮಾಡುವುದಕ್ಕೆ ಮುಂದಿನ ಬಜೆಟ್‌ನಲ್ಲಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟು ಹೋಬಳಿಯಲ್ಲಿ ಎಷ್ಟು ಎಂದು ಜಾನುವಾರುಗಳ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ಮಾಡುವುದಕ್ಕೆ ಪ್ರಸ್ತಾವನೆಯನ್ನು ಕೊಡುತ್ತಿದ್ದೇವೆ. ಆದ್ದರಿಂದ ಅದು ಈ ವರ್ಷವೇ ಆದರೂ ಆಗಬಹುದು. ಹೀಗಿರುವಾಗ ನಮಗೆ ತಾತ್ಸಾರ ಇದೆ, ನಮಗೆ ಆಸಕ್ತಿ ಇಲ್ಲವೆಂದು ಹೇಳುವುದು ಬೇಡ. ನಮಗೆ ನಿಮಗಿಂತ ಹೆಚ್ಚು ಆಸಕ್ತಿ ಮತ್ತು ಕಳಕಳಿ ಇದೆ. ಕೆಲವು ನ್ಯೂನತೆಗಳಿಂದಾಗಿ ಮಾಡುವುದಕ್ಕೆ ಆಗಿಲ್ಲ. ಈ ವರ್ಷ ಮಾಡುತ್ತಿದ್ದೇವೆ.

ಶ್ರೀ ಎನ್.ಚೆಲುವರಾಯಸ್ವಾಮಿ:- ಕಳೆದ ವರ್ಷವೂ ಇದೇ ಉತ್ತರವನ್ನು ಕೊಟ್ಟಿರಿ. ಈ ವರ್ಷವೂ ಇದೇ ಉತ್ತರ ಇದೆ.

ಶ್ರೀ ಎ.ಕೃಷ್ಣಪ್ಪ:- 700 ಸಂಸ್ಥೆಗಳನ್ನು ಅಪ್‌ಗ್ರೆಡೇಷನ್ ಮಾಡಿದ ಮೊದಲನೇ ಸರ್ಕಾರ

ನಮ್ಮದೇ ಆಗಿದೆ. ಇದು ನಿಮ್ಮ ಗಮನದಲ್ಲಿರಲಿ.

ಶ್ರೀ ಎನ್.ಚಲುವರಾಯಸ್ವಾಮಿ:- ಅದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಸಿಬ್ಬಂದಿ ಕೊರತೆ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಕೊರತೆಯನ್ನು ತುಂಬುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎ.ಕೃಷ್ಣಪ್ಪ:- ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. 1312 ಹುದ್ದೆಗಳನ್ನು ಭರ್ತಿ ಮಾಡಿದಂಥ ಇತಿಹಾಸ ನಮ್ಮದೇ ಇರುವುದು. ಹಿಂದೆಂದೂ ಇದನ್ನು ಮಾಡಿರಲಿಲ್ಲ. ಈ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ. ಮೊದಲನೇ ಸುತ್ತಿನಲ್ಲಿ 80 ಪರ್ಸೆಂಟ್ ಭರ್ತಿ ಮಾಡಿದ್ದಾರೆ. ಇನ್ನು 20 ಪರ್ಸೆಂಟ್ ಎರಡನೇ ಹಂತದಲ್ಲಿ ಆಗುತ್ತದೆ. ಎರಡನೇ ಹಂತದ ನೇಮಕಾತಿ ಪ್ರಕ್ರಿಯೆ ಆರಂಭಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ:- ಜಾನುವಾರುಗಳ ಸಂಖ್ಯೆ ಮೇಲೆ ಆಸ್ಪತ್ರೆ ಮಾಡಿದ್ದೇವೆ ಎಂದು ಹೇಳಿದಿರಿ. ನಮ್ಮ ರಾಜ್ಯದಲ್ಲಿ ಇರುವ ಜಾನುವಾರುಗಳ ಸಂಖ್ಯೆಯನ್ನು ತೆಗೆದುಕೊಂಡರೆ ಈಗಿರುವ ಆಸ್ಪತ್ರೆಗಳು ಯಾವುದಕ್ಕೂ ಸಾಕಾಗುವುದಿಲ್ಲ. ಹಿಂದೆ ಕೂಡ ವಿಧಾನಸಭೆಯಲ್ಲಿ ಭರವಸೆಯನ್ನು ಕೊಟ್ಟಿದ್ದರು. ಎಲ್ಲಾ ಗ್ರಾಮ ಪಂಚಾಯತಿಗಳಿಗೂ ಪಶು ಚಿಕಿತ್ಸಾ ಕೇಂದ್ರಗಳನ್ನು ಕೊಡುತ್ತೇವೆ ಎಂದು. ಇದನ್ನು ಯಾವಾಗ ಮಾಡುತ್ತೀರಿ?

ಶ್ರೀ ಎ.ಕೃಷ್ಣಪ್ಪ:- ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಇದರ ಸೆನ್ಸಸ್ ಪ್ರತಿದಿನ, ಪ್ರತಿ ತಿಂಗಳು ಮಾಡುವುದಿಲ್ಲ. ಇದು ಹತ್ತು ವರ್ಷಕ್ಕೊಮ್ಮೆ ಮಾಡುವಂಥಾದ್ದು. ಹಿಂದೆ ಅಗ್ರಿಕಲ್ಚರಲ್ ಕಮೀಷನ್ ಪ್ರಕಾರ ಚಿಕಿತ್ಸಾಲಯಗಳು ಜಾನುವಾರುಗಳ ಸಂಖ್ಯೆಗೆ ಸರಿಸಮಾನ ಆಗಿತ್ತು. ಈಗ ಜನಸಂಖ್ಯೆ ಜಾಸ್ತಿಯಾಗಿದೆ. ಮುಂದಿನ ರಿವ್ಯೂ ತೆಗೆದುಕೊಂಡು ಅದನ್ನು ಜಾಸ್ತಿ ಮಾಡುತ್ತೇವೆ. ಮಾನ್ಯ ಅಧ್ಯಕ್ಷರೇ, ನಿಮ್ಮಲ್ಲಿ ಜನಸಂಖ್ಯೆ ಈಗ ಇರಬಹುದು. ಹಿಂದೆ ಮಾಡಿದಂತಹ ಜನಗಣತಿಗೆ ಅನುಗುಣವಾಗಿ ಸರಿಯಾಗಿದೆ. ಕೇಂದ್ರ ಸರ್ಕಾರದವರು ಸಹ ಸ್ಟಡೀ ಮಾಡಿ ವರದಿ ಕೊಟ್ಟಿದ್ದಾರೆ. ಈಗ ಜನಸಂಖ್ಯೆ ಜಾಸ್ತಿಯಾಗಿದೆ. ಎಲ್ಲಿ ಜನಸಂಖ್ಯೆ ಜಾಸ್ತಿಯಾಗಿದೆ ಅದನ್ನು ಮುಂದಿನ ದಿನಗಳಲ್ಲಿ ತೆಗೆದುಕೊಳ್ಳಬೇಕಾಗುತ್ತದೆ.

ಬೆಂಗಳೂರು ನಗರದ ಮದರ್ ಡೈರಿ ಬೂತುಗಳಲ್ಲಿ ಯಂತ್ರಗಳು ಕೆಟ್ಟು ಹೋಗಿರುವುದು.